**ಶ್ರೀ ಕೆ.ಎಂ. ಶಿವಲಿಂಗೇಗೌಡ** : ದಯಮಾಡಿ ನಾವು ಮಂಡಿಸುವುದಕ್ಕೆ, submission ಮಾಡುವುದಕ್ಕೆ ಅವಕಾಶ ಕೊಡಿ. ಆಮೇಲೆ ನೀವು ಯಾವುದಕ್ಕಾದರೂ convert ಮಾಡಿ. ಯಾವ ರೀತಿಯಲ್ಲಾದರೂ ಚರ್ಚೆಗೆ ತೀರ್ಮ ಕೊಡಿ.

**ಅಧ್ಯಕ್ಷರು** : ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರರು ನೀಡಿರುವ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕಾಗಿ ಸಲ್ಲಿಸುವ ವಂದನಾ ನಿರ್ಣಯದ ಮೇಲೆ ಪ್ರಸ್ತಾಪಿಸಬಹುದಾಗಿದೆ. ಆದರೆ, ಬಹಳ ಗಂಭೀರವಾದಂಥ ವಿಷಯವನ್ನು ಪ್ರಸ್ತಾಪ ಮಾಡಿರುವುದರಿಂದ ಇದನ್ನು ನಿಯಮ 60ರ ಬದಲಾಗಿ, ನಿಯಮ 69ರಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿರುತ್ತೇನೆ. ಮತ್ತು ಚರ್ಚೆಯನ್ನು ಈಗಲೇ ಪ್ರಾರಂಭಿಸಬಹುದು.

**(ಗೊಂದಲ)**

**ಅಧ್ಯಕ್ಷರು** : ಎಲ್ಲರಿಗೂ ಅವಕಾಶ ಕೊಡುತ್ತೇನೆ. 2 ಗಂಟೆಗಳ ಕಾಲ ಅವಕಾಶ ಕೊಡುತ್ತೇನೆ.

**(ಗೊಂದಲ)**

**ಶ್ರೀ ಹೆಚ್.ಕೆ. ಕುಮಾರಸ್ವಾಮಿ** : ಮಾನ್ಯ ಅಧ್ಯಕ್ಷರೆ, Point of order . . . . .

**ಅಧ್ಯಕ್ಷರು** : ಆಯಿತು, ಕುಳಿತುಕೊಳ್ಳಿ. ಎಲ್ಲರೂ ಎದ್ದುನಿಂತರೆ ಹೇಗೆ?

**ಶ್ರೀ ಹೆಚ್.ಕೆ. ಕುಮಾರಸ್ವಾಮಿ** : ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದಲ್ಲಿ ಎಲ್ಲ ವಿಷಯಗಳು ಕೂಡ . . . .

**ಅಧ್ಯಕ್ಷರು** : ಎರಡು ಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ. ಈಗ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಿ.

**(ಗೊಂದಲ)**

**ಶ್ರೀ ಕೆ.ಎಂ. ಶಿವಲಿಂಗೇಗೌಡ** : ತಾವು ತೀರ್ಮ ಕೊಡುವುದು ಆಮೇಲೆ. ನಮಗೂ ಸಹ ನಿಯಮ 60ರ ಅಡಿಯಲ್ಲಿ, ಕರ್ನಾಟಕ ರಾಜ್ಯದ ಅಧಿನಿಯಮದ . . . . .